ಆಕ್ರಮಿಸಿಕೊಂಡ. ಆ ಬಳಿಕ ಅವನಿಗೆ ನಿರಾಳವೆನಿಸಿ ನಿದ್ರೆ ಆವರಿಸಿತ್ತು. ಬೆಳಿಗ್ಗೆ ಜಂಪಣ್ಣ ಎದ್ದು ಹೊರ ಬಂದಾಗ ಕಾಯನಿಗೆ ಎಚ್ಚರವಾಯಿತು.

ಪ್ರಸನ್ನವದನನಾಗಿ ಕುಳಿತಿದ್ದ ಕಾಯನನ್ನು ಕಂಡು ಅಚ್ಚರಿ ಪ್ರಕಟಿಸಿದ ಜಂಪಯ್ಯ. 'ಇವ್ನು ಯಾವಾಗ ಬಂದ.. ಅಲ್ಲಿ ಮಲಗಿದ್ನಲ್ವಾ..?' ಪಾಂಡುರಂಗನನ್ನುದ್ದೇಶಿಸಿ ಕೇಳಿದ ಜಂಪಯ್ಯ. ಪಾಂಡುವನ್ನು ಕಂಡು ನಕ್ಕ ಕಾಯ ನಿಧಾನವಾಗಿ ನುಡಿದ, 'ಜಂಪಣ್ಣ.. ನಿನ್ನ ಬಳಿ ಮಾತನಾಡಬೇಕು.. ಕೂತ್ಕೋ..'

ಜಂಪಣ್ಣ ಕುತೂಹಲದಿಂದ ಕಣ್ಣು ನಿಮಿರಿಸಿ ಕಾಯನೆಡೆ ನೋಡುತ್ತ, 'ಏನು ಮಾರಾಯ..?'

'ಆ ದಿನದ ನಿನ್ನ ಮಾತು ಈಗ ಒಪ್ಪಿಕೊಳ್ತಾ ಇದೀನಿ.. ಅದೇ.. ನನ್ನ ಮತ್ತು ಕಮಲಿಯ ಮದುವೆ ಬಗ್ಗೆ..' ಜಂಪಣ್ಣನಿಗೆ ಖುಷಿಯಿಂದ ತುಟಿ ಕಿವಿಗಳವರೆಗೂ ಹಿಗ್ಗಿದವು.

'ಓಹ್.. ಖುಷಿಯಾಯಿತು ಕಣಪ್ಪಾ.. ಬೆಳಿಗ್ಗೆ ಬೆಳಿಗ್ಗೆ ಎಂಥ ಸಿಹಿಸುದ್ದಿ ಹೇಳಿದೆ.. ಆ ಹೆಣ್ಣು ಮಗಳಿಗೂ ಬೇರೆ ಆಧಾರ ಇರಲಿಲ್ಲ.. ಅವಳ ಮಾತು ಕೇಳಿ ನಿನ್ಗೂ ಬೇಜಾರಾಗಿ ಒಪ್ಪಿಕೊಂಡೆಯಾ..?'

ಕಮಲಿ ಜೀವನದಲ್ಲಿ ಬೇಸತ್ತು ಜೀವ ಕಳೆದುಕೊಳ್ಳಲು ಹೊರಟಿದ್ದನ್ನು ಹೇಳಬೇಕೆಂದು ಅವನಿಗೆ ಅನ್ನಿಸಲಿಲ್ಲ.

'ಹಾಗೇನಿಲ್ಲ.. ಇಬ್ಬರೂ ಸಮಾನ ದುಃಖಿಗಳು.. ಹೊಂದಾಣಿಕೆ ಆಗುತ್ತೆ ಅಂದುಕೋತೀನಿ.. ಮತ್ತೆ ಈ ಪಾಂಡು ಕೂಡಾ ನನ್ನ ಜೀವದ ಗಂಟಾಗಿದ್ದಾನೆ.. ನಿಮ್ಮೆಲ್ಲರ ಹಾರೈಕೆ ಇದ್ದರೆ ಸುಖವಾಗಿ ಇರ್ತೀವಿ ಅನ್ಸುತ್ತೆ..'

ಜಂಪಣ್ಣ ಸಂಭ್ರಮದಿಂದ ಎದ್ದು ಶಿವಯ್ಯನ ಮನೆ ಕಡೆಗೆ ಓಡಿದ, 'ರತ್ನಕ್ಕನಿಗೆ ಹೇಳ್ತೀನಿ..'

ಅಷ್ಟೇ ರಭಸದಲ್ಲಿ ಅವರಿಬ್ಬರೂ ಹೊರಬಂದರು. 'ರತ್ನಕ್ಕ.. ನನ್ನ ಮಾತು ಕಾಯ ಕಡೆಗೂ ಒಪ್ಕೊಂಡು ಬಿಟ್ಟ.. ನನ್ನ ಮಾತು ಅವನು ಯಾವತ್ತೂ ಮೀರಲ್ಲ..' ತನ್ನಿಂದಲೇ ಈ ಸಂಬಂಧ ಬೆಸೆಯಿತೆಂಬಂತೆ ತೋರ್ಪಡಿಸಿದ. ಕಾಯ ಮನದಲ್ಲೇ ನಕ್ಕ.

'ಯೋಗಿ.. ನೀನು ನಮ್ಮ ಕಮಲೀನ್ನ ಲಗ್ನ ಆಗ್ತಿರೋದು ತುಂಬಾ ಖುಷಿಯಾಗ್ತಿದೆ.. ಅವ್ಳನ್ನೂ ಈ ಮಗೂನ್ನೂ ಚೆನ್ನಾಗಿ ನೋಡ್ಕೋತೀಯಲ್ಲಪ್ಪಾ..?'

ಕಾಯ ಆಗಲೆನ್ನುವಂತೆ ತಲೆಯಾಡಿಸಿದ. ಸುದ್ದಿ ವೇಗವಾಗಿ ಪಸರಿಸಿತು. ಎಂಟೂ ಮನೆಗಳು ತಮ್ಮದೇ ಮನೆಯ ಸಂಭ್ರಮ ಎನ್ನುವಂತೆ ಬಂದು ಸೇರಿಕೊಂಡರು. ಜಂಪಯ್ಯ ಎಲ್ಲರಿಗೂ ಸಕ್ಕರೆ ಹಂಚಿ ಖುಷಿ ಪ್ರಕಟಿಸಿದ. ಕಮಲಿ ನಾಚಿ ಮನೆಯಿಂದ ಹೊರಗೇ ಬರಲಿಲ್ಲ.

ಜಂಪಯ್ಯ ಕೇಳಿದ, 'ಈಗ ಕಾಯ ಮದುವೆ ಆದರೆ ಅವ್ರಿಗೊಂದು ಮನೆ ಬೇಕಲ್ವಾ..?'

ಶಿವಯ್ಯ ಈಗ ಮುಂದೆ ಬಂದು ಗಂಭೀರವಾಗಿ ನುಡಿದ, 'ಜಂಪಣ್ಣ.. ನಿನಗೆ ಒಂದು ಮಾತು ಹೇಳಬೇಕು.. ನಾನು ಮತ್ತೆ ರತ್ನ.. ಇಲ್ಲಿರಲ್ಲ.. ನಾವು ಕಾರಗದ್ದೆಗೆ ಹೊರಟು ಹೋಗ್ತೀವಿ.. ಮೊನ್ನೆ ಆಸ್ಪತ್ರೆಗೆ ಸೇರಿಕೊಂಡಾಗ ಅನಂತಯ್ಯ ಬಂದಿದ್ದ.. ಅವನ ತೋಟದ ಮನೇಲಿ ಇರಲು ಹೇಳಿದ್ದಾರೆ.. ನಮಗೂ ಇಲ್ಲಿದ್ರೆ ವೀರಭದ್ರನ ನೆನಪು ಕಾಡುತ್ತೆ.. ಇಲ್ಲಿ ಅನಾನುಕೂಲಗಳೂ ಜಾಸ್ತಿ.. ನಮಗೂ ಇಲ್ಲಿ ಬೇಡ ಅನ್ನಿಸಿದೆ.. ಈಗ ಕಮಲಿಯನ್ನು ಕಾಯ ಮದ್ವೆ ಆದ್ರೆ ಅವರು ನಾವಿರೋ ಮನೇಲಿ ಇರಲಿ.. ನನ್ನ ಕೆಲಸ ನನ್ನ ಬದಲು ಕಾಯ ಮಾಡಲಿ.. ನನಗೆ ಯಾವ ಹಣದ ಪಾಲು ಬೇಡಾ.. ಅವರಿಬ್ಬರೂ ಚೆನ್ನಾಗಿ ಜೀವನ ಮಾಡಿಕೊಂಡಿರಲಿ.. ಸಾಕು..' ಎಂದ. ಶಿವಯ್ಯ ಬಿಟ್ಟು ಹೋಗುತ್ತಿರುವ ಸಂಗತಿ ಕೇಳಿ ಎಲ್ಲರೂ ಬೇಸರಗೊಂಡರು.

'ಇಷ್ಟು ವರ್ಷ ಮಕ್ಕಳ ಥರ ನೋಡಿಕೊಂಡ ಗಿಡಗಳು ಈಗ ಫಲ ಕೊಡುವ ಹೊತ್ತಿಗೆ ಬಿಟ್ಟು ಹೋಗ್ತೀನಿ ಅಂತೀಯಲ್ಲೋ ಶಿವಣ್ಣ.. ಇಷ್ಟು ಶ್ರಮ ಪಟ್ಟಿದ್ದೀಯಾ.. ಇನ್ನೊಮ್ಮೆ ಆಲೋಚಿಸು..' ಜಂಪಣ್ಣ ನುಡಿದ. ಉಳಿದವರೂ ಅದೇ ಮಾತೆಂದರೂ ಈ ಸಲ ಶಿವಣ್ಣನ ನಿರ್ಧಾರ ಅಚಲವಾಗಿತ್ತು.

'ನಾನು ಇವತ್ತೇ ಹೊರಡುವ ವ್ಯವಸ್ಥೆ ಮಾಡ್ತೀನಿ.. ಅಲ್ಲಿ ಒಳ್ಳೇ ದಿನ ನೋಡಿ ಬಂದು ನಿಮ್ಗೆ ತಿಳಿಸ್ತೀನಿ.. ಅಲ್ಲೇ ಯಾವುದಾದರೂ ದೇವಸ್ಥಾನದಲ್ಲಿ ಮದ್ವೆ ಮುಗಿಸೋಣ..' ಎಂದ ಶಿವಯ್ಯ.

'ಅಲ್ಲಿ ಇಲ್ಲಿ ಬೇಡ.. ನಾನು ಇಲ್ಲೇ ಅಜ್ಜರಕಾಡಿನಲ್ಲಿ ನಿಮ್ಮೆಲ್ಲರ ಸಮ್ಮುಖದಲ್ಲಿ ಸರಳವಾಗಿ ಮದುವೆ ಆಗುವೆ.. ಇಲ್ಲಿ ಕಾಡು ಇದೆ.. ನದಿ ಇದೆ.. ಇಷ್ಟು ಒಳ್ಳೇ ಪ್ರಕೃತಿಗಿಂತ ಬೇರೆ ವೇದಿಕೆ, ದೇವಸ್ಥಾನ ಬೇಕಾ..? ಅಲ್ಲದೆ ನೀವ್ಯಾರೂ ಒಂದು ಬಿಡಿಗಾಸು ಖರ್ಚು ಮಾಡುವುದು ಬೇಡ.. ಕಮಲಿ ಉಟ್ಟ ಬಟ್ಟೆಯಲ್ಲಿ ಬಂದರೆ ಸಾಕು..' ಕಾಯನ ಮಾತಿಗೆ ಎಲ್ಲರೂ ತಲೆದೂಗಿ, ಸಂತಸದಿಂದ ಚಪ್ಪಾಳೆ ತಟ್ಟಿದರು.

ಶಿವಯ್ಯ ಮತ್ತೆ ಕಾರಗದ್ದೆಗೆ ಹೊರಟದ್ದು ಕಮಲಿಗೆ ಸ್ವಲ್ಪ ಬೇಸರ ಮೂಡಿಸಿತಾದರೂ ಹೊಸ ಬದುಕಿನ ಹೊಸ್ತಿಲಲ್ಲಿ ನಿಂತ ಅವಳಿಗೆ ಅದೇ ಮಹತ್ವದ್ದಾಗಿದ್ದು, ಎಲ್ಲರ ಒತ್ತಾಸೆ ಇದ್ದರಿಂದ ಬೀಳ್ಕೊಡಲು ಸಿದ್ಧಳಾದಳು.

ಅವರ ಹೊಸ ಜೀವನಕ್ಕೆ ಪಾತ್ರೆ, ಪಗಡೆಗಳು ಬೇಕಿದ್ದರಿಂದ ಅವನ್ನು ಅಲ್ಲೇ ಬಿಟ್ಟು ಹೆಚ್ಚಿದ್ದನ್ನು ಮಾತ್ರ ರತ್ನವ್ವ ಕಟ್ಟಿಕೊಂಡಳು. ಮಧ್ಯಾಹ್ನದ ಒಳಗೆ ಹೊರಡುವ ಸಿದ್ಧತೆ ನಡೆಯಿತು. ಎಲ್ಲರೂ ಭಾರವಾದ ಮನಸ್ಸಿನಿಂದ ಬೀಳ್ಕೊಟ್ಟರು.

ಏನೇನೋ ಕನಸು ಕಲ್ಪನೆಗಳನ್ನು ಹೊತ್ತು ಬಂದಿದ್ದ ಶಿವಯ್ಯನಿಗೆ ಅಜ್ಜರಕಾಡಿನ ಋಣ ಮುಗಿದಿತ್ತು. ಮರುದಿನ ಬಂದು ಮಾತನಾಡಿಸಿ ಹೋಗುವುದಾಗಿ ತಿಳಿಸಿದ ದಂಪತಿ ತಮ್ಮ ಸರಂಜಾಮಿನೊಂದಿಗೆ ಅಜ್ಜರಕಾಡಿಗೆ ವಿದಾಯ ಹೇಳಿದರು.

ಉಳಿದ ಮನೆಯವರೆಲ್ಲರೂ ಕಮಲಿಯ ನೆರವಿಗೆ ನಿಂತರು, 'ಏನದರೂ ಬೇಕಾದರೆ ಹೇಳವ್ವ.. ಸಂಕೋಚ ಪಡ್ಬೇಡಾ.. ನಿನ್ನ ಲಗ್ನ ಆಗುವ ತನಕ.. ನಮ್ಮೆಲ್ಲರ ಮನೆ ನಿನ್ನ ತವರು ಎಂದುಕೋ..' ಅವರೆಲ್ಲರ ನಿವಾರ್ಜ್ಯ ಅಂತಃಕರಣಕ್ಕೆ ಕಮಲಿಗೆ ಮನದುಂಬಿ ಬಂದಿತ್ತು. ಕಮಲಿ ಒಂಟಿಯಾಗಿದ್ದರೂ ಅಪ್ಪಿತಪ್ಪಿ ಕಾಯ ಅವಳ ಮನೆಯ ಕಡೆಗೆ ಹೋಗಲಿಲ್ಲ. ಯಾವುದೇ ರೀತಿಯ ಸಲುಗೆ ಅಥವಾ ಮಿತಿ ದಾಟುವುದು ಅವನಿಗೆ ಬೇಕಿರಲಿಲ್ಲ. ಅಷ್ಟೊಂದು ಪ್ರಜ್ಞೆ ಅವನಲ್ಲಿತ್ತು.

ಒಂಟಿಯಾಗಿದ್ದಾಗ ಜಂಪಯ್ಯ ತಡೆಯದೇ ಕೇಳಿದ, 'ಒಲ್ಲೆ ಎಂದ ನೀನು ಅದು ಹೇಗೆ ಕೂಡಲೇ ಒಪ್ಪಿದೆ..? ಅಂಥದ್ದು ಏನಾಯಿತು..?'

'ಹಳೇದು ಮುಗಿದು ಹೋದ ಅಧ್ಯಾಯ.. ಅದನ್ನೇ ನೆನೆದು ಕುಳಿತರೆ, ಎಲ್ಲವೂ ತಪ್ಪೆನಿಸಿ ಬಿಡುತ್ತದೆ.. ಹೊಸ ಹೆಜ್ಜೆ ಇಡಲು ಅಳುಕಾಗುತ್ತದೆ.. ಆದರೆ, ಅದನ್ನು ಮೀರಿ ಇಂದಿನ ಬಗ್ಗೆ ಯೋಚಿಸಿದರೆ ನಿರ್ಧಾರ ಸುಲಭವಾಗುತ್ತದೆ.. ಹಳೇ ನೆನಪಿನ ಗೋರಿ ಅಗೆದರೂ ಆಳದಲ್ಲಿ ಸಿಗೋದು ಕಳೆದು ಹೋದ ದಿನಗಳು ಮಾತ್ರ.. ಅಷ್ಟೇ..' ಎಂದವನು ಕ್ಷಣ ನಿಲ್ಲಿಸಿ, ಮತ್ತೆ ಮುಂದುವರೆದ.

'ಸಾರಂಗನನ್ನು ಹೊತ್ತು ನಡೆದ ಕ್ಷಣಗಳೇ, ಪಾಂಡುವನ್ನು ಹೊತ್ತು ನಡೆದಾಗಲೂ ಪುನರಾವರ್ತನೆ ಆಯಿತೆನಿಸಿತು.. ಪಾಂಡುವನ್ನು ಬಿಟ್ಟು ಕೊಡಲು ನನ್ನಿಂದ ಆಗಲಿಲ್ಲ..ಅವನು ಬದುಕಿ ಬಂದಾಗ, ಎಲ್ಲವೂ ನನಗೆ ಮರಳಿ ದೊರಕಿದೆ ಅನ್ನಿಸಿತು.. ಹಾಗಾಗಿ ಒಪ್ಪಿದೆ.'

'ಒಳ್ಳೇದು ಮಾಡಿದೆ ಬಿಡು.. ಶಿವಯ್ಯನ ಪಾಲು ನೀನು ತಗೋ.. ಇಷ್ಟು ದಿನ ಒಂಟಿಯಾಗಿದ್ದೆ.. ಯೋಗಿ ಥರ ಇದ್ದೆ.. ಆದ್ರೆ ಈಗ ನಿನ್ನನ್ನು ನಂಬಿದ ಜೀವಗಳು ಇವೆ.. ಅವಕ್ಕೂ ಹೊಟ್ಟೆ ಬಟ್ಟೆಗೆ ಬೇಕು.. ನೀನು ಮುಂಚಿನ ಥರ ಇದ್ರೆ ಆಗಲ್ಲ.. ಅರ್ಥ ಮಾಡಿಕೋ ನಾನು ಏನು ಹೇಳ್ತೀನಿ ಅಂತ..' ಅವನ ಮಾತಿನಿಂಗಿತ ಕಾಯನಿಗೆ ಅರಿವಾಗಿತ್ತು. ಮೌನವಾಗಿ ಅನುಮೋದಿಸಿದ.

ನುಡಿದಂತೆ, ಶಿವಯ್ಯ ಮರುದಿನ ದೇವಸ್ಥಾನದ ಪುರೋಹಿತರ ಬಳಿ ಮುಹೂರ್ತ ನೋಡಿ ಬಂದಿದ್ದ. ಜಾತಕ ಇರದ ಕಾರಣ ನಾಮದ ಆಧಾರದಲ್ಲಿ ನೋಡಿದ್ದ. ಇನ್ನೆರಡು ದಿನಗಳಲ್ಲಿ ಮದುವೆ ಇತ್ತು. ಏಕಾಏಕಿ ಅಜ್ಜರಕಾಡಿನಲ್ಲಿ ಸಂಭ್ರಮ ಕಳೆಕಟ್ಟಿತು. ಬೇಡವೆಂದರೂ ಕೇಳದೇ, ಅಲ್ಲಿನ ನಿವಾಸಿಗಳು ಮನೆಯ ಮುಂದಿನ ರಸ್ತೆಗೆ ಇಬ್ಬದಿಯಲ್ಲೂ ತೋರಣ ಕಟ್ಟಿದರು. ರಸ್ತೆಗೆ ನೀರು ಹಾಕಿ ಧೂಳು ಹರಡದಂತೆ ನೋಡಿಕೊಂಡರು. ಶಿವಯ್ಯ ಕಾರಗದ್ದೆಯಿಂದ ದನದ ಸೆಗಣಿ ತಂದು ನೀರು ಮಾಡಿ ರಸ್ತೆಗೆ ಸಾರಿಸಿದ. ಶಿವಯ್ಯನ ಮನೆಯ ಕಾಡು ಹೂಗಳಿಂದ ಸಿಂಗಾರಗೊಂಡಿತು. ಕಮಲಿ ಮದುಮಗಳಂತೆ ನಾಚಿದರೆ, ಕಾಯನೂ ಒಳಗೇ ಪುಳಕಗೊಂಡಿದ್ದ. ಹಿಂದೆ ಮಿನಾಲಿಯನ್ನು ಕದ್ದು ಕರೆದುಕೊಂಡು ಹೋಗಿದ್ದ. ಜೊತೆಗೆ ಬಾಳ್ವೆ ಆರಂಭಿಸಿದ ಬಳಿಕ, ಸಂತೆಯಿಂದ ಖರೀದಿಸಿದ ಕರಿಮಣಿ ಕಟ್ಟಿದ್ದ. ಮನಸ್ಸು ಬಂಧಿಸಿದ ಬಳಿಕ, ಶಾಸ್ತ್ರಗಳೆಲ್ಲವೂ ನಾಮಕಾವಸ್ಥೆಗೆ ಎಂದು ಭಾವಿಸಿದ್ದ.

ಅವನಿಗೆ ಯಾವ ಆಡಂಬರವೂ ಬೇಕಿರಲಿಲ್ಲ. ಅವರ ಭಾವನೆಗಳಿಗೆ ಧಕ್ಕೆಯುಂಟು ಮಾಡಲು ಇಚ್ಛಿಸದೇ ಮೌನವಹಿಸಿದ್ದ. ಶಿವಯ್ಯ ಮತ್ತು ಜಂಪಯ್ಯ ತಮ್ಮ ಖುಷಿಗಾಗಿ, ಅಲ್ಲಿದ್ದ ನಿವಾಸಿಗಳಿಗೆ